ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೫ ಫೆಬ್ರವರಿ ೨೦೨೩ ಸಂಚಿಕೆ ೩

"ಮನುಷ್ಯ ಏಕಾಂಗಿಯಾಗಿರುವಾಗ, ಸಂಪೂರ್ಣ ಏಕಾಂಗಿಯಾಗಿರುವಾಗ ಯಾವುದೇ ಕುಟುಂಬಕ್ಕೆ, ಯಾವುದೇ ದೇಶಕ್ಕೆ, ಯಾವುದೇ ಸಂಸ್ಕೃತಿಗೆ, ಯಾವುದೇ ಬದ್ಧತೆಗೆ ಸೇರದೆ ಏಕಾಂಗಿಯಾಗಿರುವಾಗ, ಹೊರಗಿನವನು ಎಂಬ ಪ್ರಜ್ಞೆ ಇರುತ್ತದೆ. ಅಂದರೆ ಎಲ್ಲ ಬಗೆಯ ಯೋಚನೆಗಳಿಗೆ, ಕ್ರಿಯೆಗಳಿಗೆ, ಕುಟುಂಬಗಳಿಗೆ, ರಾಷ್ಟ್ರಕ್ಕೆ ಹೊರಗಿನವನು ಎಂಬ ಭಾವ. ಯಾರು ಪೂರ್ತಿ ಏಕಾಂಗಿಯಾಗಿರುವನೋ ಅವನೇ ಮುಗ್ಧ. ಈ ಮುಗ್ಧತೆಯೇ ಮನಸ್ಸನ್ನು ದುಃಖದಿಂದ ಬಿಡುಗಡೆಗೊಳಿಸುತ್ತದೆ.

- ಜೆ. ಕೃಷ್ಣಮೂರ್ತಿ

"ನಾನು ಏತಕ್ಕಾಗಿ ಯಾತನೆಪಡುತ್ತಿದ್ದೇನೆ?"

ಕೃಷ್ಣಮೂರ್ತಿ : ನೀವು ಯಾತನೆಪಡುವಾಗ, ನಿಮಗೆ ನೋವಿರುವಾಗ, ಅದರ ಅರ್ಥವೇನು? ಸ್ಥೂಲದೇಹದ ನೋವಿಗೆ ಒಂದು ಅರ್ಥವಿದೆ, ಆದರೆ ಪ್ರಾಯಶಃ ನಾವು ಮಾನಸಿಕ ನೋವು ಮತ್ತು ಕಷ್ಟದ ಬಗ್ಗೆ ಮಾತನಾಡುತ್ತಿದ್ದೇವೆ, ಮಾನಸಿಕ ನೋವು ಮತ್ತು ಕಷ್ಟದ ಬೇರೆ ಬೇರೆ ಮಟ್ಟಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಕಷ್ಟಪಡುವುದರ ಅರ್ಥವೇನು? ಕಷ್ಟಪಡುವುದರ ಅರ್ಥವನ್ನು ಕಂಡುಹಿಡಿಯಲು ನೀವೇಕೆ ಅಪೇಕ್ಷಿಸುತ್ತೀರಿ? ಅದಕ್ಕೆ ಅರ್ಥವಿಲ್ಲ ಎಂದಲ್ಲ-ಅದರ ಅರ್ಥವನ್ನು ಈಗ ನೀವು ಏಕೆ ಅಪೇಕ್ಷಿಸುತ್ತೀರಿ? ನೀವು ಕಷ್ಟಪಡುವುದರ ಕಾರಣವನ್ನು ಕಂಡುಹಿಡಿಯಲು ಬಯಸುವುದೇಕೆ? ``ನಾನೇಕೆ ಕಷ್ಟಪಡುತ್ತಿದ್ದೇನೆ?'' ಎಂಬ ಪ್ರಶ್ನೆಯನ್ನು ನಿಮಗೆ ನೀವು ಹಾಕಿಕೊಂಡು ಅದರ ಕಾರಣವನ್ನು ಹುಡುಕುವಾಗ, ನೀವು ಕಷ್ಟದಿಂದ ತಪ್ಪಿಸಿಕೊಳ್ಳುತ್ತಿಲ್ಲವೇ? ಕಷ್ಟದ ಅರ್ಥವನ್ನು ಅನ್ವೇಷಿಸುವಾಗ, ನಾನು ಅದರಿಂದ ದೂರ ಹೋಗುತ್ತಿಲ್ಲವೇ, ಅದರಿಂದ ನುಣುಚಿಕೊಳ್ಳುತ್ತಿಲ್ಲವೇ, ಮತ್ತು ಅದರಿಂದ ಪಲಾಯನ ಮಾಡುತ್ತಿಲ್ಲವೇ? ಇರುವ ಸಂಗತಿ ಏನೆಂದರೆ, ನಾನು ಕಷ್ಟಪಡುತ್ತಿದ್ದೇನೆ. ನನ್ನ ಮನಸ್ಸನ್ನು ಅದರ ಬಗ್ಗೆ ಆಲೋಚನೆಯಲ್ಲಿ ತೊಡಗಿಸಿ "ಈಗ ಕಷ್ಟ ಏಕೆ?" ಎಂದು ಕೇಳಿದ ಕೂಡಲೇ ಕಷ್ಟದ ತೀವ್ರತೆಯನ್ನು ನಾನು ತಗ್ಗಿಸಿಬಿಟ್ಟಿದ್ದೇನೆ.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ ನಾವು ಕಷ್ಟವನ್ನು ತಗ್ಗಿಸಲು, ಉಪಶಮನ ಮಾಡಲು, ದೂರವಿಡಲು, ಅದಕ್ಕೆ ವಿವರಣೆಕೊಟ್ಟು ತಳ್ಳಿಬಿಡಲು ಅಪೇಕ್ಷಿಸುತ್ತೇವೆ. ನಿಜವಾಗಿಯೂ ಈ ರೀತಿ ಮಾಡುವುದರಿಂದ ಕಷ್ಟವನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಓಡಿಹೋಗಬೇಕೆಂಬ ಅಪೇಕ್ಷೆಯಿಂದ ನಾನು ಬಿಡಿಸಿಕೊಂಡರೆ (ಆ ಅಪೇಕ್ಷೆ ಇಲ್ಲದಿದ್ದರೆ), ಆಗ ಕಷ್ಟದ ತಿರುಳನ್ನು ಅರಿಯಲು - ಪ್ರಾರಂಭಿಸುತ್ತೇನೆ. ಕಷ್ಟವೆಂದರೇನು? ಅದು ಕ್ಷೋಭೆಯನ್ನುಂಟುಮಾಡುತ್ತದೆ, ಅಲ್ಲವೇ? ಬೇರೆ ಬೇರೆ ಮಟ್ಟಗಳಲ್ಲಿ, ಸ್ಥೂಲಮಟ್ಟದಲ್ಲಿ ಮತ್ತು ಸುಪ್ತಪ್ರಜ್ಞೆಯ ವಿವಿಧ ಮಟ್ಟಗಳಲ್ಲಿ ಕ್ಷೋಭೆಯನ್ನುಂಟುಮಾಡುತ್ತದೆ. ಕ್ಷೋಭೆಯ ತೀಕ್ಷ್ಣಸ್ವರೂಪ ನನಗಿಷ್ಟವಿಲ್ಲ.

ನನ್ನ ಮಗ ಸತ್ತುಹೋಗಿದ್ದಾನೆ. ನಾನು ಅವನ ಸುತ್ತ ಅಥವಾ ನನ್ನ ಮಗಳ ಸುತ್ತ ಅಥವಾ ನನ್ನ ಗಂಡನ ಸುತ್ತ ಅಥವಾ ಬೇರೊಬ್ಬ ವ್ಯಕ್ತಿಯ ಸುತ್ತ ನನ್ನ ಸುತ್ತ ನನ್ನ ಎಲ್ಲಾ ಆಶಾಗೋಪುರಗಳನ್ನು ಕಟ್ಟಿಕೊಂಡಿದ್ದೇನೆ. ಅವನು ಏನಾಗಬೇಕೆಂದು ನಾನು ಬಯಸಿದ್ದೆನೋ, ಅವನನ್ನು ಆ ಎಲ್ಲಾ ವಿಷಯಗಳಿಂದಲೂ ಸುತ್ತುವರಿಸಿ ಪ್ರತಿಷ್ಠೆಮಾಡಿದ್ದೇನೆ, ಮತ್ತು ಅವನನ್ನು ನನ್ನ ಸಂಗಾತಿಯನ್ನಾಗಿ ಇರಿಸಿಕೊಂಡಿದ್ದೇನೆ ಇತ್ಯಾದಿ. ಇದ್ದಕ್ಕಿದ್ದಂತೆ ಅವನು ಹೊರಟುಹೋದನು. ಆದ್ದರಿಂದ ಕ್ಷೋಭೆಯುಂಟಾಗಿದೆ, ಅಲ್ಲವೇ? ಆ ಕ್ಷೋಭೆಯನ್ನು ನಾನು ಕಷ್ಟ ಅಥವಾ ಯಾತನೆ ಎಂಬುದಾಗಿ ಕರೆಯುತ್ತೇನೆ.

> "ನೀವೇ ಅವಲೋಕನಕಾರ ಮತ್ತು ಅವಲೋಕಿತ ಆಗಿರುವುದರಿಂದ, ನೀವೇ ಭೂಮಿ ಹಾಗೂ ಸಮುದ್ರದ ಅಖಂಡ ಚಲನೆ ಕೂಡಾ"
>
> ಜೆ.ಕೃಷ್ಣಮೂರ್ತಿ

ಆ ಯಾತನೆ ನನಗೆ ಇಷ್ಟವಾಗದಿದ್ದರೆ, ಆಗ ನಾನು ಈ ರೀತಿ ಹೇಳುತ್ತೇನೆ. "ನಾನು ಏತಕ್ಕಾಗಿ ಯಾತನೆಪಡುತ್ತಿದ್ದೇನೆ?" ನಾನು ಅವನನ್ನು ಎಷ್ಟೊಂದು ಪ್ರೀತಿಸುವೆ'', ``ಅವನು ಹೀಗಿದ್ದನು'', ``ನಾನು ಅದನ್ನು ಪಡೆದಿದ್ದೆ''. ಶಬ್ದಗಳ ಮೂಲಕ, ನಾಮಪಟ್ಟಿಗಳ ಮೂಲಕ, ನಂಬಿಕೆಗಳ ಮೂಲಕ, ನಮ್ಮಲ್ಲಿ ಅನೇಕರು ತಪ್ಪಿಸಿಕೊಳ್ಳುವಂತೆ ನಾನೂ ತಪ್ಪಿಸಿಕೊಳ್ಳಲು ಯತ್ನಿಸುತ್ತೇನೆ. ಅವು ನಿದ್ದೆಬರಿಸುವ ಮದ್ದಿನಂತೆ ಕೆಲಸ ಮಾಡುತ್ತವೆ. *ನಾನು ಆ ರೀತಿ ಮಾಡದಿದ್ದರೆ, ಏನು ಸಂಭವಿಸುತ್ತದೆ?*

ಆಗ ನಾನು ಸುಮ್ಮನೆ ಯಾತನೆಯ ಅರಿವಿನಲ್ಲಿರುತ್ತೇನೆ. ನಾನು ಅದನ್ನು ನಿಂದಿಸುವುದಿಲ್ಲ, ಅದನ್ನು ಸಮರ್ಥಿಸಿಕೊಳ್ಳುವುದಿಲ್ಲ - ನಾನು ಯಾತನೆಪಡುತ್ತಿದ್ದೇನೆ. ಆಗ ನಾನು ಅದರ ಚಲನೆಯನ್ನು ಹಿಂಬಾಲಿಸಬಲ್ಲೆ, ಅಲ್ಲವೇ? ಆಗ ನಾನು ಯಾತನೆಯರ್ಥದ ತಿರುಳನ್ನು ಹಿಂಬಾಲಿಸಬಲ್ಲೆ-``ನಾನು ಹಿಂಬಾಲಿಸುತ್ತೇನೆ'' ಎಂದರೆ, ಅದನ್ನು ಅರ್ಥಮಾಡಿಕೊಳ್ಳಲು, ಅರಿಯಲು ಪ್ರಯತ್ನಿಸುತ್ತಿದ್ದೇನೆ ಎಂಬುದಾಗಿ ತಿಳಿಯಬೇಕು. ಅದರ ಅರ್ಥವೇನು? ಯಾತನೆ ಪಡುತ್ತಿರುವುದು ಯಾವುದು? ಯಾತನೆ ಏತಕ್ಕಾಗಿ ಇದೆ ಎಂಬುದಲ್ಲ, ಯಾತನೆಗೆ ಕಾರಣವೇನು ಎಂಬುದೂ ಅಲ್ಲ, ಆದರೆ ವಾಸ್ತವವಾಗಿ ಏನು ಸಂಭವಿಸುತ್ತಿದೆ? ನೀವು ಈ ವ್ಯತ್ಯಾಸವನ್ನು ಗಮನಿಸುತ್ತಿದ್ದೀರೋ ಅಥವಾ ಇಲ್ಲವೋ ನನಗೆ ತಿಳಿಯದು. ಆಗ ನಾನು ಸುಮ್ಮನೆ ಯಾತನೆಯ ಇರುವಿಕೆಯ ಎಚ್ಚರದ ಅರಿವಿನಲ್ಲಿರುತ್ತೇನೆ, ಯಾತನೆ ನನ್ನಿಂದ ಪ್ರತ್ಯೇಕವಾಗಿರುವುದಿಲ್ಲ. ನಾನು ಯಾತನೆಯನ್ನು ನೋಡುತ್ತಿರುವ ಒಬ್ಬ ವೀಕ್ಷಕನಾಗಿರುವುದಿಲ್ಲ, ಅದು ನನ್ನ ಒಂದು ಭಾಗವಾಗಿದೆ; ಅರ್ಥಾತ್, ನನ್ನ ಸಮಗ್ರ ಜೀವ ಯಾತನೆ ಅನುಭವಿಸುತ್ತಿದೆ. ಆಗ ನಾನು ಯಾತನೆಯ ಚಲನೆಯನ್ನು ಅನುಸರಿಸಲು ಮತ್ತು ಅದು ಎಲ್ಲಿಗೆ ಕರೆದೊಯ್ಯುತ್ತದೆ ಎಂಬುದನ್ನು ನೋಡಲು ಸಮರ್ಥನಾಗುತ್ತೇನೆ.

ನಾನು ಆ ರೀತಿ ಮಾಡಿದರೆ, ಅದು ಖಂಡಿತವಾಗಿಯೂ ತೆರೆದುಕೊಳ್ಳುತ್ತದೆ, ಅಲ್ಲವೇ? ಆಗ ನಾನು ``ನನ್ನ'' ಮೇಲೆ ವಿಶೇಷವಾಗಿ ಒತ್ತು ಹಾಕಿದ್ದೇನೆಯೇ ಹೊರತು ನಾನು ಪ್ರೀತಿಸುವ ವ್ಯಕ್ತಿಯ ಮೇಲಲ್ಲ, ಎಂಬುದು ನನಗೆ ಗೋಚರವಾಗುತ್ತದೆ. ಅವನು ನನ್ನ ದುಃಖದಿಂದ, ನನ್ನ ಏಕಾಂಗಿತನದಿಂದ, ನನ್ನ ದುರದೃಷ್ಟದಿಂದ ನನ್ನನ್ನು ಮುಚ್ಚಿಡುವ ಮುಸುಕಿನಂತಿದ್ದನು, ಅಷ್ಟೆ. ನಾನು ಏನಾಗಬೇಕೆಂದು ಬಯಸಿದ್ದೆನೋ ಅದಾಗಿಲ್ಲವಾದ್ದರಿಂದ, ಅವನು ಅದಾಗುತ್ತಾನೆಂದು ನಾನು ನಂಬಿಕೊಂಡಿದ್ದೆನು. *ಈಗ ಅದು ಹೊರಟುಹೋಯಿತು; ನಾನು ಉಳಿದುಕೊಂಡಿದ್ದೇನೆ. ನನಗೆ ದಾರಿ ತಪ್ಪಿದಂತಾಗಿದೆ, ನಾನು ಏಕಾಂಗಿಯಾಗಿದ್ದೇನೆ. ಅವನು ಇಲ್ಲದಿದ್ದರೆ ನಾನು ಶೂನ್ಯ. ಆದ್ದರಿಂದ ನಾನು ಅಳುತ್ತೇನೆ; ಅವನು ಹೊರಟುಹೋದನು ಎಂಬುದಕ್ಕಾಗಿ ಅಲ್ಲ, ಆದರೆ ನಾನು ಉಳಿದುಕೊಂಡಿದ್ದೇನೆ ಎಂಬುದಕ್ಕಾಗಿ.* ನಾನು ಒಂಟಿಯಾಗಿಬಿಟ್ಟೆ. ಈ ಒಂದು ಸ್ಥಿತಿಗೆ ಬಂದು ತಲುಪುವುದು ಬಹಳ ಕಠಿಣ, ಅಲ್ಲವೇ? "ನಾನು" ಏಕಾಂಗಿಯಾಗಿದ್ದೇನೆ, ಈ ಏಕಾಂಗಿತನದಿಂದ ಬಿಡುಗಡೆ ಹೊಂದುವದು ಹೇಗೆ?'' ಎಂದು ಸುಮ್ಮನೆ ಹೇಳುವುದಕ್ಕಿಂತಲೂ, ನಿಜವಾಗಿಯೂ ಗುರುತಿಸುವುದು ಬಹಳ ಕಷ್ಟ. ಸುಮ್ಮನೆ ಬಾಯಿಯಲ್ಲಿ ಹೇಳಿದರೆ ಅದು ತಪ್ಪಿಸಿಕೊಳ್ಳುವ ಒಂದು ಮಾರ್ಗ ಆದರೆ ಅದನ್ನು ಪ್ರಜ್ಞಾವತ್ತಾಗಿ ಅರಿತು ಅದರೊಡನೆಯೇ ಉಳಿದುಕೊಂಡು, ಅದರ ಚಲನೆಯನ್ನು ನೋಡುವುದು ಕಠಿಣವಾದ ಕೆಲಸ. ನಾನು ಇದನ್ನು ಒಂದು ಉದಾಹರಣೆಯನ್ನಾಗಿ ಮಾತ್ರ ತೆಗೆದುಕೊಂಡಿದ್ದೇನೆ. ಕ್ರಮ ಕ್ರಮವಾಗಿ ಅದು ಅರಳಲು, ತೆರೆದುಕೊಳ್ಳಲು ಅವಕಾಶಕೊಟ್ಟರೆ, ನಾನು ದಾರಿಕಾಣದವನಾಗಿರುವುದರಿಂದ ಯಾತನೆ ಪಡುತ್ತಿದ್ದೇನೆ ಎಂಬುದು ನನಗೆ ಗೋಚರವಾಗುತ್ತದೆ.

> **"ಏನೋ ಆಗುವ ಬಯಕೆಯೇ ಆಕ್ರಮಣಕಾರಿತ್ವ, ತನ್ನ ಸ್ವರೂಪದಲ್ಲೆ ಆಕ್ರಮಣಕಾರಿತ್ವವು ನಮ್ಮನ್ನು ಕುರುಡಾಗಿಸುತ್ತದೆ."**
> **ಜೆ.ಕೃಷ್ಣಮೂರ್ತಿ**

ನಾನು ಯಾವುದನ್ನು ನೋಡಲು ಇಷ್ಟಪಡುವುದಿಲ್ಲವೋ, ಅದರ ಕಡೆ ಗಮನಕೊಡುವಂತೆ ಒತ್ತಾಯಕ್ಕೆ

ಗುರಿಯಾಗಿದ್ದೇನೆ. ನಾನು ಯಾವುದನ್ನು ನೋಡಲು ಮತ್ತು ಅರಿತುಕೊಳ್ಳಲು ಹಿಂದೆಗೆಯುತ್ತಿದ್ದೇನೆಯೋ ಅದು ನನ್ನ ಮೇಲೆ ಬಲವಂತದಿಂದ ಹೇರಲ್ಪಡುತ್ತಿದೆ. ತಪ್ಪಿಸಿಕೊಳ್ಳಲು ನನಗೆ ಸಹಾಯ ಮಾಡುವುದಕ್ಕೆ ಅಸಂಖ್ಯಾತ ಜನರಿದ್ದಾರೆ - ಧಾರ್ಮಿಕ ವ್ಯಕ್ತಿಗಳೆಂದು ಕರೆಯಲ್ಪಡುವ ಸಾವಿರಾರು ಜನರು, ಅವರ ನಂಬಿಕೆಗಳು ಮತ್ತು ಸಿದ್ಧಾಂತಗಳೊಡನೆ, ಆಶಯಗಳು ಮತ್ತು ಕಲ್ಪನೆಗಳೊಡನೆ, ಸಿದ್ಧರಾಗಿದ್ದಾರೆ- "ಅದು ಧರ್ಮ, ಅದು ದೇವರ ಇಚ್ಛೆ"- ಇತ್ಯಾದಿ, ಇವರೆಲ್ಲರೂ ನನಗೆ ಯಾತನೆಯಿಂದ ಹೊರಬರಲು ಒಂದು ದಾರಿಯನ್ನು ತೋರುತ್ತಾರೆ. ಆದರೆ ನಾನು ಆ ಯಾತನೆಯೊಂದಿಗೆ ಇರಬಲ್ಲವನಾದರೆ, ಅದನ್ನು ನನ್ನಿಂದ ದೂರತಳ್ಳದಿದ್ದರೆ, ಅದನ್ನು ಹದ್ದಿನಲ್ಲಿಡಲು ಪ್ರಯತ್ನಿಸದಿದ್ದರೆ, ಅಥವಾ ಅದನ್ನು ನಿರಾಕರಿಸದಿದ್ದರೆ, ಆಗ ಏನು ಸಂಭವಿಸುತ್ತದೆ? ನನ್ನ ಮನಸ್ಸು ಯಾತನೆಯ ಚಲನೆಯನ್ನು ಈ ರೀತಿ ಹಿಂಬಾಲಿಸುತ್ತಿರುವಾಗ ಅದು ಯಾವ ಸ್ಥಿತಿಯಲ್ಲಿರುತ್ತದೆ? ಯಾತನೆ ಎಂಬುದು ಕೇವಲ ಒಂದು ಶಬ್ದವೇ, ಅಥವಾ ವಾಸ್ತವಿಕತೆಯೇ?

ಅದು ಒಂದು ವಾಸ್ತವಿಕತೆಯಾಗಿದ್ದು ಬರಿಯ ಶಬ್ದವಾಗಿಲ್ಲದಿದ್ದರೆ, ಆಗ ಆ ಶಬ್ದಕ್ಕೆ ಯಾವ ಅರ್ಥವೂ ಇಲ್ಲ, ಆದ್ದರಿಂದ ತೀವ್ರವಾದ ನೋವಿನ ಭಾವನೆ ಮಾತ್ರ ಇರುತ್ತದೆ. ಈ ನೋವು ಯಾವುದರ ಬಗ್ಗೆ? ಅದು ಒಂದು ಕಲ್ಪಿತ ಚಿತ್ರದ ಬಗ್ಗೆ, ಒಂದು ಅನುಭವದ ಬಗ್ಗೆ, ನೀವು ಪಡೆದಿರುವ ಅಥವಾ ಪಡೆಯದಿರುವ ಒಂದು ವಸ್ತುವಿನ ಬಗ್ಗೆ. ನೀವು ಅದನ್ನು ಪಡೆದಿದ್ದರೆ, ಅದನ್ನು ಸುಖವೆಂದು ಕರೆಯುತ್ತೀರಿ; ಅದನ್ನು ಪಡೆದಿಲ್ಲದಿದ್ದರೆ, ಅದು ನೋವಾಗುತ್ತದೆ. ಆದ್ದರಿಂದ ನೋವು, ದುಃಖ ಎಂಬುದು ಒಂದು ವಸ್ತುವಿನೊಡನೆ ನೀವು ಹೊಂದಿರುವ ಸಂಬಂಧದಲ್ಲಿದೆ. ಆ ವಸ್ತು ಬರಿಯ ಶಾಬ್ದಿಕ ನಿರೂಪಣೆಯೇ ಅಥವಾ ಅದು ಒಂದು ವಾಸ್ತವಿಕತೆಯೇ? ಅರ್ಥಾತ್, ದುಃಖವಿದ್ದಾಗ, ಅದು ಒಂದು ವಸ್ತುವಿಗೆ ಸಂಬಂಧಪಟ್ಟಂತೆ ಮಾತ್ರ ಇರುತ್ತದೆ. ಅದು ತನ್ನಷ್ಟಕ್ಕೆ ತಾನೇ ಇರಲಾರದು-ಭಯ ಯಾವ ರೀತಿಯಲ್ಲಿ ಒಂದು ವಸ್ತುವಿಗೆ ಸಂಬಂಧಪಟ್ಟಂತೆ ಮಾತ್ರ ಇರುತ್ತದೆಯೋ, ತನ್ನಷ್ಟಕ್ಕೆ ತಾನು ಇರಲಾರದೋ, ಅದೇ ರೀತಿಯಲ್ಲೇ ಯಾತನೆಯೂ ಕೂಡ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ, ಒಂದು ನಡೆದ ಸಂಗತಿಗೆ ಸಂಬಂಧಪಟ್ಟಂತೆ, ಒಂದು ಭಾವನೆಗೆ ಸಂಬಂಧಪಟ್ಟಂತೆ ಇರುತ್ತದೆ. ಈಗ ನೀವು ಯಾತನೆಯ ಪೂರ್ಣ ಅರಿವಿನಲ್ಲಿದ್ದೀರಿ. ಆ ಯಾತನೆ, ಕಷ್ಟ ನಿಮ್ಮಿಂದ ಪ್ರತ್ಯೇಕವಾಗಿದೆಯೇ? ಆದ್ದರಿಂದ ನೀವು ಆ ಯಾತನೆಯನ್ನು ನೋಡುತ್ತಿರುವ ಬರಿಯ ವೀಕ್ಷಕರಾಗಿದ್ದೀರಾ? ಅಥವಾ ಆ ಯಾತನೆಯೇ ನೀವಾಗಿದ್ದೀರಾ?

> "ಯಾವುದು ವಾಸ್ತವವಾಗಿ ಇದೆಯೋ ಅದರೊಡನೆ ಇರಬೇಕಾಗುತ್ತದೆ. ಆಗ ಮಾತ್ರ ಮನಸ್ಸು ನಿಶ್ಚಲವಾಗುತ್ತದೆ."
> **ಜೆ.ಕೃಷ್ಣಮೂರ್ತಿ**

ಯಾತನೆಪಡುತ್ತಿರುವ ವೀಕ್ಷಕ ಇಲ್ಲದಿರುವಾಗ ಆ ಯಾತನೆ ನಿಮ್ಮಿಂದ ಭಿನ್ನವಾಗಿದೆಯೇ? ನೀವೇ ಆ ಯಾತನೆ ಆಗಿದ್ದೀರಿ, ಅಲ್ಲವೇ? ನೀವು ನೋವಿನಿಂದ ಪ್ರತ್ಯೇಕವಾಗಿಲ್ಲ-ನೀವೇ ನೋವಾಗಿದ್ದೀರಿ. ಆಗ ಏನು ಸಂಭವಿಸುತ್ತದೆ? ನಾಮಪಟ್ಟಿ ಹಾಕುತ್ತಿಲ್ಲ, ಅದಕ್ಕೊಂದು ಹೆಸರು ಕೊಡುತ್ತಿಲ್ಲ ಮತ್ತು ಆ ಮೂಲಕ ಅದನ್ನು ದೂರತಳ್ಳುತ್ತಿಲ್ಲ - ನೀವು ಸುಮ್ಮನೆ ಆ ನೋವಾಗಿದ್ದೀರಿ, ಆ ಭಾವನೆಯಾಗಿದ್ದೀರಿ, ಆ ಸಂಕಟವಾಗಿದ್ದೀರಿ. ನೀವು ಅದಾಗಿರುವಾಗ, ಏನು ಸಂಭವಿಸುತ್ತದೆ? ನೀವು ಅದನ್ನು ಹೆಸರಿಸದಿರುವಾಗ, ಅದರ ಬಗ್ಗೆ ಭಯಪಡದಿರುವಾಗ, ಕೇಂದ್ರ ಅದರೊಡನೆ ಸಂಬಂಧಹೊಂದಿದೆಯೇ? ಕೇಂದ್ರ ಅದರೊಡನೆ ಸಂಬಂಧ ಹೊಂದಿದ್ದರೆ, ಆಗ ಅದು

ಹೆದರಿಕೊಳ್ಳುತ್ತದೆ. ಆಗ ಅದು ಕಾರ್ಯ ಪ್ರವೃತ್ತವಾಗಬೇಕು ಮತ್ತು ಆ ಯಾತನೆಯ ಬಗ್ಗೆ ಏನನ್ನಾದರೂ ಮಾಡಬೇಕು. ಆದರೆ ಕೇಂದ್ರವೇ ಅದಾಗಿದ್ದರೆ, ಆಗ ನೀವು ಏನು ಮಾಡುತ್ತೀರಿ? **ಆಗ ಮಾಡಬೇಕಾದ್ದು ಏನೂ ಇಲ್ಲ, ಇದೆಯೇ?** ನೀವೇ ಅದಾಗಿದ್ದರೆ, ಮತ್ತು ನೀವು ಯಾತನೆ ಇದೆ ಎಂದು ಸುಮ್ಮನೆ ಒಪ್ಪಿಕೊಳ್ಳದಿದ್ದರೆ, ಅದಕ್ಕೆ ನಾಮಪಟ್ಟಿ ಹಾಕದಿದ್ದರೆ, ಅದನ್ನು ಒಂದು ಪಕ್ಕಕ್ಕೆ ನೂಕದಿದ್ದರೆ-ನೀವೇ ಆ ವಸ್ತು ಆಗಿದ್ದರೆ ಆಗ ಏನು ಸಂಭವಿಸುತ್ತದೆ? ನೀವು ಯಾತನೆ ಪಡುತ್ತಿದ್ದೀರಿ ಎಂದು ಆಗ ಹೇಳುತ್ತೀರೇನು? ಖಂಡಿತವಾಗಿಯೂ ಒಂದು ಮೂಲಭೂತವಾದ ಬದಲಾವಣೆ ಉಂಟಾಗಿದೆ.

ಅಲ್ಲಿಂದಾಚೆಗೆ "ನಾನು ಯಾತನೆ ಪಡುತ್ತಿದ್ದೇನೆ"ಎಂಬುದು ಇರುವುದಿಲ್ಲ; ಏಕೆಂದರೆ, ಯಾತನೆಯನ್ನು ಅನುಭವಿಸಲು ಕೇಂದ್ರವಿರುವುದಿಲ್ಲ. ಕೇಂದ್ರ ಏತಕ್ಕೆ ಸಂಕಟ ಪಡುತ್ತದೆಯೆಂದರೆ, ಅದು ಏನೆಂಬುದನ್ನು ನಾವು ಇದುವರೆಗೂ ಎಂದೂ ಪರೀಕ್ಷಿಸಿಲ್ಲ. ನಾವು ಶಬ್ದದಿಂದ ಶಬ್ದಕ್ಕೆ, ಪ್ರತಿಕ್ರಿಯೆಯಿಂದ ಪ್ರತಿಕ್ರಿಯೆಗೆ, ಚಲಿಸುತ್ತಾ ಜೀವಿಸುತ್ತಿದ್ದೇವೆ. ``ಯಾತನೆಪಡುತ್ತಿರುವ ಆ ವಸ್ತು ಯಾವುದು ಎಂಬುದನ್ನು ನಾನು ನೋಡಿಯೇ ಬಿಡುತ್ತೇನೆ'' ಎಂಬುದಾಗಿ ನಾವು ಎಂದಿಗೂ ಹೇಳಿಲ್ಲ. ಬಲಾತ್ಕಾರದಿಂದ, ಶಿಸ್ತಿನಿಂದ, ನೀವು ಅದನ್ನು ನೋಡಲು ಸಾಧ್ಯವಿಲ್ಲ. ನೀವು ಆಸಕ್ತಿಯಿಂದ, ಸ್ವಾಭಾವಿಕವಾದ ಗ್ರಹಣಶಕ್ತಿಯಿಂದ ನೋಡಬೇಕು. ಆಗ ನಾವು ಯಾತನೆ, ನೋವು ಎಂಬುದಾಗಿ ಕರೆಯುವ, ನಾವು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಈ ವಿಷಯ ಮತ್ತು ಶಿಸ್ತು ಇವೆಲ್ಲವೂ ಮಾಯವಾಗಿರುವುದನ್ನು ನೀವು ಕಾಣುತ್ತೀರಿ. ಎಲ್ಲಿಯವರೆಗೂ ಒಂದು ವಿಷಯ ನನ್ನಿಂದ ಹೊರಗಿದೆಯೆಂದು ನಾನು ಭಾವಿಸುವುದಿಲ್ಲವೋ, ಮತ್ತು ಅದರೊಡನೆ ಸಂಬಂಧ ಹೊಂದಿರುವುದಿಲ್ಲವೋ, ಅಲ್ಲಿಯವರೆಗೆ ಸಮಸ್ಯೆ ಇರುವುದಿಲ್ಲ; ಅದು ನನ್ನಿಂದ ಹೊರಗಡೆ ಇದೆಯೆಂಬ ಭಾವನೆಯಿಂದ ನಾನು ಅದರೊಡನೆ ಸಂಬಂಧ ಏರ್ಪಡಿಸಿಕೊಂಡ ಕ್ಷಣದಲ್ಲಿಯೇ ಸಮಸ್ಯೆ ಉದ್ಭವಿಸುತ್ತದೆ.

ಎಲ್ಲಿಯವರೆಗೆ ಯಾತನೆ ನನ್ನಿಂದ ಹೊರಗಿದೆ ಎಂದು ನಾನು ಭಾವಿಸುತ್ತೇನೆಯೋ-ಅಲ್ಲಿಯವರೆಗೂ ನಾನು ಯಾತನೆಯನ್ನು ಅನುಭವಿಸುತ್ತೇನೆ. ಏಕೆಂದರೆ, ನನ್ನ ಸಹೋದರನನ್ನು ಕಳೆದುಕೊಂಡೆ, ನನ್ನಲ್ಲಿ ಹಣ ಇಲ್ಲ, ಇತ್ಯಾದಿ ಕಾರಣಗಳಿಗಾಗಿ ನಾನು ಯಾತನೆ ಪಡುತ್ತೇನೆ, ನಾನು ಆ ಯಾತನೆಯೊಡನೆ ಒಂದು ಸಂಬಂಧವನ್ನು ರೂಢಿಪಡಿಸಿಕೊಂಡಿದ್ದೆನೆ, ಆದರೆ ಆ ಸಂಬಂಧ ಕಾಲ್ಪನಿಕವಾದುದು. ಹಾಗಲ್ಲದೆ, ನಾನೇ ಆ ಯಾತನೆ ಅಥವಾ ದುಃಖವಾದರೆ, ನಾನು ಇರುವ ಸಂಗತಿಯನ್ನು ಗ್ರಹಿಸಿದರೆ, ಆಗ ಆ ಸಮಗ್ರ ವಿಷಯ ಪರಿವರ್ತನೆ ಹೊಂದುತ್ತದೆ, ಅದು ಒಂದು ಬೇರೆಯೇ ಆದ ಅರ್ಥವನ್ನು ಪಡೆಯುತ್ತದೆ. ಆಗ ಸಂಪೂರ್ಣವಾದ ಗಮನ ಇರುತ್ತದೆ, ಸಂಘಟಿತ ಗಮನ ಇರುತ್ತದೆ. ಮತ್ತು ಯಾವುದಕ್ಕೆ ಪೂರ್ಣಗಮನವನ್ನು ಕೊಡುತ್ತೇವೆಯೋ, ಅದನ್ನು ಅರಿತುಕೊಳ್ಳುತ್ತೇವೆ; ಆಗ ಅದು ವಿಚ್ಛಿನ್ನವಾಗುತ್ತದೆ, ಆಗ ಭಯ ಇರುವುದಿಲ್ಲ, ಆದ್ದರಿಂದ `ದುಃಖ' ಎಂಬ ಪದವೂ ಇರುವುದಿಲ್ಲ.

"ಧ್ಯಾನದಲ್ಲಿ ತಿಳಿದುಕೊಳ್ಳುವಿಕೆಯಿಲ್ಲ, ಗುರುತಿಸುವಿಕೆಯಿಲ್ಲ. ಆಗಿಹೋದ ಯಾವುದೇ ಘಟನೆಗಳ ನೆನಪೇ ಇಲ್ಲ."
ಜೆ.ಕೃಷ್ಣಮೂರ್ತಿ

ಕೃತಿ: "ಮೊದಲ ಹಾಗೂ ಕೊನೆಯ ಬಿಡುಗಡೆ"
ಅನುವಾದ: ರುಕ್ಮಿಣಿ ಕೃಷ್ಣಮೂರ್ತಿ
ಮೂಲ: "The First and Last Freedom"

ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

Study Retreat Themes 2023 Feb – April:

Feb 09 - 12 : Silence, Stillness, Meditation.

Mar 09 - 12 : Living in the Grip of Fear - what does fear do to you?

Apr 06-09 : Why do i get Angry?

ಕನ್ನಡ ಶಿಬಿರದ ಮಾಹಿತಿ

kfistudy@gmail.com
ದೂರವಾಣಿ: 9972995800

ಸಹ-ಅಧ್ಯಯನ ಶಿಬಿರ, 24 ರಿಂದ 26 ಫೆಬ್ರವರಿ 2023

ವಿಷಯ : "ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ"

ಬೆಂಗಳೂರು ಕೃಷ್ಣಮೂರ್ತಿ ಅಧ್ಯಯನ ಕೇಂದ್ರ.

ಸೂಚನೆ:

ಮೂರುದಿನದ ಶಿಬಿರದ ಆಶಯವು ಜೆ ಕೃಷ್ಣಮೂರ್ತಿಯವರ ಬೋಧನೆಗಳ ಬೆಳಕಿನಲ್ಲಿ **"ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ"** ವಿಷಯವನ್ನು ಸ್ವಾಧ್ಯಾಯ ಹಾಗೂ ಸಹ-ಅಧ್ಯಯನ ಚಟುವಟಿಕೆಗಳ ಮೂಲಕ ಶೋಧಿಸುವುದಾಗಿದೆ. ಈ ಶಿಬಿರವು ನೂರು ಎಕರೆ ವಿಸ್ತೀರ್ಣದ ಸೊಂಪಾದ ಹಸಿರು ವನದ ನೈಸರ್ಗಿಕ ಸೌಂದರ್ಯ ಹಾಗೂ ಪ್ರಶಾಂತ ಮೌನದ ವಾತಾವರಣದಲ್ಲಿ ನೆರವೇರುತ್ತದೆ. ಈ ಶಿಬಿರದ ಎಲ್ಲಾ ಚಟುವಟಿಕೆಗಳು ಮತ್ತು ಸಂವಾದಗಳು ಕನ್ನಡದಲ್ಲಿ ನಡೆಯಲಿವೆ. ಶಿಬಿರ ನಡೆಯುವ ಅಧ್ಯಯನ ಕೇಂದ್ರದಲ್ಲಿ ನಿಯಮಿತ ಸ್ಥಳಾವಕಾಶವಿರುವುದರಿಂದ, ಮೊದಲು ನೋಂದಾಯಿಸಿದ ಶಿಬಿರಾರ್ಥಿಗಳಿಗೆ ಆದ್ಯತೆಯಿರುತ್ತದೆ. ಶಿಬಿರಾರ್ಥಿಗಳು ದೂರವಾಣಿ ಅಥವಾ ಮಿಂಚಂಚೆ ಮೂಲಕ ನೋಂದಾಯಿಸಬಹುದು.

ತೀವ್ರಭಾವವನ್ನು ಅರಿಯುವುದು

ನಮ್ಮನ್ನು ನಾವು ಶಿಕ್ಷಿಸಿಕೊಳ್ಳುವುದು ಧಾರ್ಮಿಕ ಜೀವನವೇ? ದೇಹವನ್ನೋ ಮನಸ್ಸನ್ನೋ ದಂಡಿಸಿಕೊಳ್ಳುವುದು ಅರಿವಿನ ಕುರುಹೇ? ಸ್ವ-ಹಿಂಸೆಯು ಸತ್ಯವನ್ನು ಕಾಣುವ ಮಾರ್ಗವೇ? ಪಾವಿತ್ರ್ಯವೆಂದರೆ ನಿರಾಕರಣೆಯೇ? ವೈರಾಗ್ಯದ ಮೂಲಕ ಬಹುದೂರ ಸಾಗಬಹುದೆಂದು ತಿಳಿದಿದ್ದೀರೇನು? ಸಂಘರ್ಷದ ಮೂಲಕ ಶಾಂತಿ ದೊರೆಯುವುದೆಂದು ಭಾವಿಸಿದ್ದೀರೇನು? ಗುರಿಗಿಂತ, ಫಲಿತಾಂಶಕ್ಕಿಂತ, ದಾರಿಯು ಮುಖ್ಯ, ವಿಧಾನ ಮುಖ್ಯವೆಂದು ಭಾವಿಸಿದ್ದೀರೇನು? ಗುರಿ ಅಥವಾ ಫಲಿತಾಂಶ ಭವಿಷ್ಯತ್ತಿಗೆ ಸೇರಿದ್ದು, ದಾರಿ ಅಥವಾ ವಿಧಾನ ಎಂಬುದು ಇಂದಿಗೆ ಸೇರಿದ್ದು, 'ಇರು'ವಂಥದ್ದು. ಬುದ್ಧಿವಂತಿಕೆಯ ವಿವರಣೆಗಳಿಗಿಂತ, ಕಲ್ಪಿತ ಆದರ್ಶಗಳಿಗಿಂತ, ದೃಢವಾಗಿರಬೇಕೆಂದು ಬಯಸುವ ನಿರ್ಧಾರಗಳಿಗಿಂತ, ವಾಸ್ತವವನ್ನು, ಏನು ಇದೆಯೋ ಅದನ್ನು ಮೊದಲು ಅರಿಯಬೇಕಾದದ್ದು ಮುಖ್ಯ.

ದುಃಖವು ಸುಖಕ್ಕೆ ಇರುವ ದಾರಿಯಲ್ಲ. ಯಾವುದನ್ನು ತೀವ್ರಭಾವ (ಪ್ಯಾಶನ್) ಎನ್ನುತ್ತೇವೆಯೋ ಅದನ್ನು ಅರಿಯುವುದು ಮುಖ್ಯವೇ ಹೊರತು ತೀವ್ರಭಾವವನ್ನು ದಮನಿಸುವುದೋ ಉದಾತ್ತವೆಂದು ಭಾವಿಸುವುದೋ ಮುಖ್ಯವಾದುದಲ್ಲ(?). ನೀವು ಏನನ್ನು ಬೇಕಾದರೂ ಕಂಡುಹಿಡಿಯಿರಿ, ಯಾವ ಉಪಕರಣವನ್ನು ಬೇಕಾದರೂ ಶೋಧಿಸಿ, ಅದರಿಂದಾಗಿ ನಾವು ಯಾವುದನ್ನು ಪ್ರೀತಿಸುವುದಿಲ್ಲವೋ, ಯಾವುದನ್ನು ಅರಿತಿಲ್ಲವೋ ಅದು ಮಾತ್ರ ಬಲಗೊಳ್ಳುತ್ತದೆ(?). ನಾವು ಯಾವುದನ್ನು ತೀವ್ರಭಾವ ಎಂದು ಕರೆಯುತ್ತೇವೆಯೋ ಅದನ್ನು ಪ್ರೀತಿಸುವುದರಿಂದ ಮಾತ್ರ ಅರ್ಥಮಾಡಿಕೊಳ್ಳಬಹುದು.

ಕೃತಿ: "ಅನುದಿನ ಚಿಂತನ"
ಅನುವಾದ : ಓ ಎಲ್ ನಾಗಭೂಷಣ ಸ್ವಾಮಿ
ಮೂಲ: "The Book of Life"

ಜೆ.ಕೃಷ್ಣಮೂರ್ತಿ ಪುಸ್ತಕಗಳು : ರಿಯಾಯಿತಿಯಲ್ಲಿ ಲಭ್ಯ

ಆತ್ಮೀಯ ಸಹಪಯಣಿಗರೇ,**ಈ ಮೇಲಿನ ನಾಲ್ಕು ಪುಸ್ತಕಗಳ** ಪ್ರತಿಗಳು 50% ವರೆಗೆ ರಿಯಾಯಿತಿ ದರದಲ್ಲಿ ಲಭ್ಯವಿವೆ. **ನಿಮ್ಮ ಬಳಗದ ಗ್ರಂಥಾಲಯ**, ಪುಸ್ತಕಾಲಯ, ವಿದ್ಯಾರ್ಥಿಗಳು, ಶಿಕ್ಷಕರು, ಬಂಧುಗಳು, ಇತ್ಯಾದಿ ಆಸಕ್ತರಿಗೆ ತಿಳಿಸಿ. ಪ್ರತಿಗಳಿಗಾಗಿ ಸಂಪರ್ಕಿಸಿ - 7760807069, 9972995800.

ಹೊಸ ಪುಸ್ತಕಗಳ ಪ್ರಕಟಣೆ :೨೦೨೩

ಈ ಹೊಸ ಪುಸ್ತಕಗಳು **ವಸಂತ ಪ್ರಕಾಶನ ಹಾ**ಗು ಎಲ್ಲಾ ಪ್ರಸ್ತುತ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರುತ್ತವೆ. **ತಿಂಗಳ ಮೊ**ದಲ ಭಾನುವಾರದ ಸಂವಾದ ಸಭೆಯ ಬಳಿಕ **ಶಾಲಾ ಆ**ವರಣದಲ್ಲಿ ಹಾಗೂ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿ ಕೃತಿಗಳು **ಲಭ್ಯ**ವಿರುತ್ತವೆ.

ಪ್ರಸ್ತುತ ಕೃತಿಗಳು:

What are you Doing with your Life, Krishnamurti to Himself and Leaving School Entering life ಕೃತಿಗಳಿಂದ ಅನುವಾದವಾಗಿವೆ.

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. **ರಾ**ಘವೇಂದ್ರರಾವ್
ಪ್ರೊ|| ಓ. ಎಲ್. **ನಾ**ಗಭೂಷಣ ಸ್ವಾಮಿ
ಡಾ|| **ವನಮಾಲಾ** ವಿಶ್ವನಾಥ್